ಶ್ರೀ ಟಿ. ಚನ್ನಯ್ಯ.—ಆ ರೀತಿ ಮಾಡುವುದೇನೋ ನೂಕ್ತ. ಆದರೆ ನಿರ್ದಿಷ್ಟವಾಗಿ ಇಂಥ ಸ್ಥಳದಲ್ಲಿ ಇಂಥ ಅಧಿಕಾರಿಗಳೆಂದು ತಾವು ತಿಳಿಸಿದರೆ ನಾನು ಆ ವಿಚಾರ ಪರಿಶೀಲನೆ ಮಾಡುತ್ತೇನೆ.

Sri K. S. VASAN.—In answer to (c) in the list given, Sl. No. 228, Dr. K. Krishna Rao, District Medical Officer is retained in K.G.F. for over three years eight months. What was it due to? Was it due to indispensability?

Sri T. CHANNIAH.—There is no other place to which he could be transferred.

Sri K. S. VASAN.—Is it not a fact that the entire population of K.G.F. have a number of times represented to the Health Minister against this Doctor being retained there after completing three years?

Sri T. CHANNIAH.—Such representations have come to the notice of the Government. We are making enquiries.

Sri K. S. VASAN.—If there is no place in the State where this doctor can be transferred, is it for the K.G.F. population to put up with this doctor?

Sri A. G. RAMACHANDRA RAO.—The allegations cannot be expected to be genuine. When an allegation is made it will have to be examined.

Sri K. S. VASAN.—Allegations have been made a number of times. I am sure the Health Minister knows there is basis for this allegation.

Sri T. CHANNIAH.—He is nearing retiring age. Therefore he is kept there only for a few months.

ಶ್ರೀ ಕೆ. ಪಂಚಾಕ್ಷರಯ್ಯ.—ಸೀರಿಯಲ್ ನಂಬರ್ 174 ರಲ್ಲಿ ತಿಳಿಸಿರತಕ್ಕ ಶ್ರೀ ಎಸ್. ದೇವರಾಜ್ ಎಂಬ ತಕ್ಕವರನ್ನು ಪಿ.ಎಸ್.ಸಿ. ಆಫೀಸಿನಲ್ಲಿ ಆರು ವರ್ಷ ಐದು ತಿಂಗಳಿಂದಲೂ ಒಂದೇ ಕಡೆ ಇಡಲು ಕಾರಣ ವೇನು? ಇವರ ಸರ್ವಿಸ್ ಅಷ್ಟು ಎಸೆಷಿಯಲ್ಲಾ ಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಅಲ್ಲಿ ನಡೆಸ ಬೇಕಾಗಿರತಕ್ಕ ಕೆಲಸಗಳಲ್ಲಿ ಒಂದು ಹೆಚ್ಚಿನ ಅನುಭವ ವಿರುವುದರಿಂದ ಅವರನ್ನು ಅಲ್ಲೇ ಇಡಲಾಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗಾದರೆ ಇನ್ನು ಇಡೀ ಸ್ಟೇಟಿನಲ್ಲೇ ಅಂಥ ದಕ್ಷರಾದವರು ಬೇರೆ ಯಾರೂ ಇಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಪಿ.ಎಸ್.ಸಿ. ಅವರಿಗೆ ಈ ಬಗ್ಗೆ ಅವರ ಖಚಿತವಾದ ಅಭಿಪ್ರಾಯ ತಿಳಿಸಬೇಕೆಂದು ನಾವು ಸೂಚಿಸಿದ್ದೆವು. ಆದರೆ ಅಲ್ಲಿರತಕ್ಕ ಅಧಿಕಾರಿಗಳು ಈ ವಿಚಾರದಲ್ಲಿ ಏನೂ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಆದಕಾರಣ ಅವರನ್ನು ಅಲ್ಲೇ ಇಡಲಾಗಿದೆ.

Ministers' visits to Delhi.

Q.—252. N. C. NAGAIAH REDDY (Gauribidnur).—

Will the Government be pleased to state:—

(*a*) the number of visits each Minister including the Chief Minister paid to Delhi since 1st April 1954 up-to-date and duration of stay on each occasion;

(*b*) the places where each Minister stayed during such visits to Delhi and the number of staff that accompanied on such visits;

(*c*) the cost incurred and certified to by each Minister for such stay on each occasion?

A.—Sri Kadidal MANJAPPA (Chief Minister).—

(*a*), (*b*) and (*c*) *Vide* Statement appended.

Statement showing the visits to Delhi by the Minister for Law and Education and staff from 1st April 1954 to 31st January 1956.

	Minister	Date of visit	Duration of stay	Places where stayed	Number of staff accompanied	Cost incurred for stay in Delhi by the Minister
						Rs.
1	Minister for Law and Education.	6-5-54 to 9-5-54	1 day	Kotah House	...	43
2	Do ...	11-8-54 to 14-8-54	2 days	do ...	...	73
3	Do ...	16-9-54 to 24-9-54	6 days	do ...	...	210
4	Do ...	4-11-54 to 6-11-54	1 day	do ...	...	26
5	Do ...	10-11-54 to 13-11-54	3 days	do ...	1	84
6	Do ...	11-1-55 to 15-1-55	3 days	do ...	...	81
7	Do ...	30-6-55 to 1-7-55	2 days	do ...	2	50
8	Do ...	21-7-55 to 26-7-55	2 days	do ...	2	60
9	Do ...	30-9-55 to 6-10-55	5 days	do ...	2	58
10	Do ...	14-1-56 to 16-1-56	2 days	do ...	1	T.A. not yet claimed.

Statement showing the visits to Delhi by the Chief Minister and other details from 1st April 1954 to 31st January 1956.

	Minister	Date of visit	Duration of stay	Places where stayed	Number of staff accompanied	Cost incurred for stay in Delhi by Chief Minister
						Rs. a. p.
1	Chief Minister.	6-11-54 to 14-11-54	8 days	Rashtrapathi Bhavan	7	416 13 0
2	Do ...	4-5-55 to 7-5-55	4 days	Imperial Hotel ...	3	936 6 6
3	Do ...	24-7-55 to 26-7-55	3 days	Residence of Sri A. P. Jain, Minister for Food and Agriculture, Government of India.	5	135 4 6
4	Do ...	2-9-55 to 5-9-55	4 days	Kotah House ...	6	132 0 0
5	Do ...	30-9-55 to 3-10-55	4 days	Hotel Imperial ...	7	450 10 3
6	Do ...	21-10-55 to 23-10-55	3 days	Hotel Imperial ...	2	
7	Do	15 12-55	1 day	Hotel Ambassador ...	1	97 9 6

(SRI KADIDAL MANJAPPA.)

Statement showing the visits to Delhi by the Minister for Public Health and Local Self-Government and his staff from 1st April 1954 to 31st January 1956.

Minister	Date of visit	Duration of stay	Places where stayed	Number of staff accompanied.	Cost incurred for stay in Delhi by the Minister.
1 Minister. for Public Health and Local Self-Government.	2-11-1955 to 8-11-1955	7 days	Kotah House	3	Rs. 150 Conveyance allowance. 2-10-0 per day for rent. 913-11-0 T.A. and D.A. drawn by the staff.

Statement showing the visits to Delhi by the Minister for Revenue and Public Works and his staff from 1st April 1954 to 31st January 1956.

Minister	Date of Visit	Duration of stay	Place where stayed	Number of staff accompanied	Cost incurred for stay in Delhi by the Minister.
					Rs. a. p.
1. Minister for Revenue and Public Works.	13-8-1954	5 days	Kotah House, New Delhi.	5	225 0 0
Do	21-7-1955	2 days	do	...	40 0 0
Do	30-9-1955	5 days	do	2	80 0 0
Do	22-10-1955	2 days	do	1	40 0 0

Statement showing the visits to Delhi by the Minister for Home and his staff from 1st April 1954 to 31st January 1956.

	Minister	Date of visit	Duration of stay	Place where stayed	Number of staff accompanied	Cost incurred for stay in Delhi by the Minister
						Rs. a. p.
1.	Minister for Home	6-1-55 to 11-1-55	6 days	Kotah House, New Delhi.	2	174 9 6
	Do	25-2-55 to 1-3-55	5 days		1	142 14 0
	Do	4-5-55 to 8-5-55	5 days		2	37 10 0
	Do	17-5-55 to 20-5-55	4 days		1	101 4 0
	Do	22-10-55 to 25-10-55	4 days		1	62 5 0
	Do	11-12-55 to 16-12-55	6 days		3	149 4 0
	Do	5-1-56 to 8-1-56	4 days		3	...
	Do	19-1-56 to 22-1-56	4 days		1	18 2 0

Statement showing the visits to Delhi by the Minister for Agriculture and his staff from 1st April 1954 to 31st January 1956.

	Minister	Date of visit	Duration of stay	Place where stayed	Number of staff accompanied	Cost incurred for stay in Delhi by the Minister
1.	Minister for Agriculture	15-2-1955	3 days	Kotah House, New Delhi.	3	...
	Do	15-4-1955	3 days	do	...	...
	Do	2-9-1955	4 days	do	3	Rs. 39-8-0 (as no Government conveyance was provided a taxi was hired).
	Do	30-9-1955	4 days	do	3	...
	Do	15-12-1955	1 day	do	...	...

Statement showing the visits to Delhi by the Minister for Industries and his staff from 1st April 1954 to 31st January 1956.

	Minister	Date of visit	Duration of stay	Place where stayed	Number of staff accompanied	Cost incurred for stay in Delhi by Minister
1.	Minister for Industries.	23-7-1955	3 days	Kotah House, New Delhi.	One	Rs. 102-4-0
	Do	31-8-1955	3 days	do	Three	Rs. 105-8-0
	Do	30-9-1955	5 days	do	Two	...

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ತಾವು ಖರ್ಚು ಮಾಡತಕ್ಕ ಹಣದ ಬಗ್ಗೆ ನರ್ಚಿಫ್ಯೆ ಮಾಡಲು ಒಂದು ವಿಶದವಾದ ಪಟ್ಟಿಯನ್ನು ಆಡಿಟರ್ ಜನರಲ್‌ರವರಿಗೆ ಕಳುಹಿಸಿ ಕೊಡತಕ್ಕಂಥ ಪದ್ಧತಿಯೇನಾದರೂ ಇದೆಯೇ?

*ಶ್ರೀ ಕಡಿದಾಳ್ ಮಂಜಪ್ಪ.—ಯಾವ ಯಾವ ಸಂದರ್ಭಗಳಲ್ಲಿ ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡರಾಗಿದೆ ಎಂಬುದಕ್ಕೆ ಉತ್ತರದಲ್ಲಿ ವಿವರಗಳನ್ನು ತಿಳಿಸಿದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಮುಖ್ಯ ಮಂತ್ರಿಗಳು ದೆಹಲಿಗೆ ಸ್ಪೇಚ್ ಗೆಸ್ಟಾಗಿ ಹೋಗಿದ್ದಾಗ ಆ ರಾಷ್ಟ್ರಪತಿ ಭವನದಲ್ಲಿ ಎಂಟು ದಿನಗಳಿದ್ದಾಗ ರೂ. 416 13 0 ಖರ್ಚು ಮಾಡಿದ್ದಾರೆ. ಆ ಬಗ್ಗೆ ಯಾವ ಯಾವ ಬಾಬಿಗಾಗಿ ಅಷ್ಟು ಹಣ ಖರ್ಚಾಯಿತೆಂಬುದಕ್ಕೆ ತಾವು ಡೀಟೈಲ್ ಪಟ್ಟಿಯನ್ನು ಕೊಟ್ಟಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆಗ ಇವರಿಗೆ ವೆಹಿಕಲ್ ಇತ್ಯಾದಿಗಳನ್ನು ಅವರು ಒದಗಿಸುತ್ತಿರಲಿಲ್ಲ. ಅದಕ್ಕಾಗಿ ಎಂಟು ದಿನಗಳವರೆಗೆ ಅವರು ಎಂಗೇಜ್ ಮಾಡಿಕೊಂಡಿದ್ದ ವೆಹಿಕಲ್ ಬಗ್ಗೆ ಮತ್ತು ಬಾಕಿ ಸಾದಿಲ್ವಾರ್ ಎಲ್ಲಾ ಸೇರಿ ಅಷ್ಟು ಖರ್ಚಾಗಿರುತ್ತದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈ ಸಾದಿಲ್ವಾರ್ ಖರ್ಚುಗಳ ಬಗ್ಗೆ ವ್ಯವಸಾಯದ ಮಂತ್ರಿಗಳು ಆ ಕೋಟಾಹೌಸಿನಲ್ಲಳಿದುಕೊಂಡಿದ್ದಾಗ ಮಾಡಿರತಕ್ಕ ಖರ್ಚು ರೂ. 39—8—0 ಎಂದು ತೋರಿಸಿದ್ದಾರೆ. ಹಾಗಿದ್ದರೆ ಅವರೇನು ಈ ಸಾದಿಲ್ವಾರ್ ವೆಚ್ಚಗಳನ್ನೆಲ್ಲಾ ದೆಹಲಿಯಿಂದ ವಾಪಸ್ಸು ಹಿಂದಿರುಗುವಾಗ ಪೂರ್ತಿಯಾಗಿ ವಾವತಿ ಮಾಡಿ ಬಂದಿದ್ದಾರೋ ಅಥವಾ ಇನ್ನೂ ಬಾಕಿಯನ್ನೇನಾದರೂ ಉಳಿಸಿಕೊಂಡು ಬಂದಿದ್ದಾರೋ (ನಗು)?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಕಡಿಮೆ ಖರ್ಚು ಮಾಡಿದ್ದಾರೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಹೋಗಲಿ ಆ ಕೋಟಾ ಹೌಸಿನಲ್ಲಿ ಅವರು ಖರ್ಚು ಮಾಡಿರತಕ್ಕ ರೂ. 39—8—0 ಟ್ಯಾಕ್ಸಿ ಇತ್ಯಾದಿಗಳಿಗಾಗಿ ಖರ್ಚಾಗಿಲ್ಲವೆಂದು ತಿಳಿಯೋಣವೇ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ನುಮಾರು ಎರಡೂವರೆ ವರ್ಷಗಳಿಂದ ಪ್ರಾಂತ ಸರ್ಕಾರದ ಮಂತ್ರಿಗಳು ದೆಹಲಿಗೆ ಹೋದಾಗ ಇವರನ್ನು ಸ್ಪೇಚ್ ಗೆಸ್ಟ್‌ಗಳಾಗಿ ಕಾಣಲಾಗುತ್ತಿದೆ. ಈ ಪದ್ಧತಿ ಅದಕ್ಕೆ ಹಿಂದೆ ಇರಲಿಲ್ಲ. ಕೇವಲ ಊಟದ ವ್ಯವಸ್ಥೆಯೊಂದನ್ನು ಮಾತ್ರ ಏರ್ಪಾಡು ಮಾಡಿದ್ದರು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ನಮ್ಮ ಮುಖ್ಯ ಮಂತ್ರಿಗಳು ಆ ಕೋಟಾ ಹೌಸಿನಲ್ಲಳಿದಿದ್ದಾಗ ಅಷ್ಟೊಂದು ಜಾಸ್ತಿ ಹಣವನ್ನು ಖರ್ಚು ಮಾಡಿರುವುದಕ್ಕೆ ಕಾರಣವೇನು? why?

Sri A. G. RAMACHANDRA RAO—It is or four days and for six members.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈ ಉತ್ತರದಲ್ಲಿ ಯಾವ ವಿವರಗಳನ್ನೂ ಕೊಟ್ಟಿಲ್ಲ. ಮುಖ್ಯ ಮಂತ್ರಿಗಳು ಅದೇ. ಕೋಟಾ ಹೌಸಿನಲ್ಲಿ ನಾಲ್ಕು ದಿನಗಳಿಗೆ, ತಮ್ಮ ಸಿಬ್ಬಂದಿ ಆರು ಜನಗಳಿಗೂ ಸೇರಿ ಅವರು ಮಾಡತಕ್ಕ ಖರ್ಚು ಜಾಸ್ತಿಯಾಗಿದೆ. ಅದೇ ತಾರೀಖಿನಲ್ಲಿ ವ್ಯವಸಾಯದ ಮಂತ್ರಿಗಳು ಮಾಡಿರತಕ್ಕ ವೆಚ್ಚ ಕಡಿಮೆಯಾಗಿದೆ. ಹೀಗೆ ಒಂದೇ ಅವಧಿಯಲ್ಲಿ ಇತರ ಮಂತ್ರಿಗಳು ಮಾಡತಕ್ಕ ಖರ್ಚಿಗಿಂತಲೂ ಅಧಿಕವಾಗಿ 132—0—0 ರೂ. ಗಳನ್ನು ಚೀಫ್‌ಮಿನಿಸ್ಟರು ಖರ್ಚು ಮಾಡಲು ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಕೋಟಾ ಹೌಸಿನಲ್ಲ ಸಂಚಾರ ಸೌಲಭ್ಯಗಳನ್ನು ಒದಗಿಸಿರುವುದಿಲ್ಲ; ಅದಕ್ಕೋಸ್ಕರವಾಗಿ ಜಾಸ್ತಿ ಖರ್ಚಾಗಿದೆ.

1 P. M.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ನಾಲ್ಕು ದಿವನಕ್ಕೆ ಆಗಿದ್ದ ರೂ. 936—6—6 ಮುಖ್ಯ ಮಂತ್ರಿಗಳು ಖರ್ಚು ಮಾಡಿಧ್ದಾರೆ. ಅದನ್ನು ವಾಪಸು ಕೊಡುತ್ತೇನೆಂದು ಹೇಳಿದ್ದರು. ಹಣವನ್ನು ವಾಪಸು ಮಾಡಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಇಲ್ಲ ಖರ್ಚಾಗಿದೆ ಎಂದು ತೋರಿಸಿದ್ದೀರಲ್ಲ!

ಶ್ರೀ ಕಡಿದಾಳ್ ಮಂಜಪ್ಪ.—Actual ಆಗಿ ಎಷ್ಟು ಖರ್ಚಾಗಿತ್ತೋ ಅದನ್ನು ತೋರಿಸಿದ್ದೇವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈಚೆಗೆ ಇಂಪೀರಿಯಲ್ ಹೋಟೆಲ್‌ನಲ್ಲದ್ದಾಗ ಖರ್ಚು ಮಾಡಿರುವುದನ್ನು ವಾಪಸು ಕೊಡಲಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸಭೆಯಲ್ಲ ಭಾಷೆ ಕೊಟ್ಟಹಾಗೆ ಮೊಬಲಗನ್ನು ವಾಪಸು ಕೊಟ್ಟಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—936 ರೂಪಾಯಿ ವಾಪಸು ಕೊಟ್ಟಿದ್ದಾರೆಂದು ಹೇಳಿದಿರಿ. ಅನೇಕಸಾರಿ ಇಂಪೀರಿಯಲ್ ಹೋಟಲ್‌ನಲ್ಲದ್ದಾಗ ಹೆಚ್ಚಾಗಿ ಖರ್ಚು ಮಾಡಿರುವ ಮೊಬಲಗನ್ನು ವಾಪಸು ಪಡೆಯುವುದಕ್ಕೆ ಏರ್ಪಾಡು ಮಾಡುತ್ತೀರಾ? ಆ ರೀತಿ ವಾಪಸು ಪಡೆಯುವುದಕ್ಕೆ ಅವಕಾಶವಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರಾಗಿಯೇ ವಾಪಸು ಕೊಟ್ಟಿದ್ದನ್ನು ತೆಗೆದುಕೊಳ್ಳಬಹುದು. ಯಾವುದೋ ಸಂದರ್ಭದಲ್ಲಿ ಖರ್ಚು ಮಾಡಿದ್ದನ್ನು ವಾಪಸು ಕೊಡಿ ಎಂದು ಕೇಳುವುದು ಧರ್ಮವಲ್ಲವೆಂದು ಸರ್ಕಾರದ ಭಾವನೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಧರ್ಮದ ವಿಷಯ ನಾನು ಹೇಳಲಲ್ಲ. ನರ್ಚಿಫ್ಯೆ ಮಾಡಿರುವುದರಲ್ಲಿ ಅವರು ಯಾವ ರೀತಿ ಮಾಡಿದ್ದಾರೆಂದು ತಿಳಿದುಕೊಳ್ಳಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಇಂಪೀರಿಯಲ್ ಹೋಟಲಿನಲ್ಲಿ ಜಾಸ್ತಿ ಖರ್ಚಾಗಿದೆ. ಅದಕ್ಕೋಸ್ಕರ ಖರ್ಚಾದ ಮೊಬಲಗನ್ನು ಅವರು ಕೊಟ್ಟಿದ್ದಾರೆ.

Mr. SPEAKER.—Question time is ver.